ಶ್ರೀ ಎಸ್. ಆರ್. ಬೊಮ್ಮಾಯಿ.—ಯಾರು ಸಾಗುವಳಿ ಮಾಡುತ್ತಿದ್ದಾರೆ ಅವರಿಗೆ ರಕ್ಷಣೆ ಕೊಡುತ್ತೇವೆ. ೬ಳಿ ಜನರಿಗೆ ಜಮೀನನ್ನು ಕೊಟ್ಟಿದ್ದರೂ ಕೂಡ, ಅದರಲ್ಲಿ ಕೆಲವರು ಜಮೀನನು ಸಾಗುವಳಿ ಮಾಡುತ್ತಾ ಇಲ್ಲ. ಅಂತಹವರಿಗೆ ರಕ್ಷಣೆ ಕೊಡುವುದಕ್ಕಾಗುವುದಿಲ್ಲ. ಯಾರು ನಿಜವಾದ ಸಾಗುವಳಿದಾರರು ಇದ್ದಾರೆ ಅಂತಹವರಿಗೆ ರಕ್ಷಣೆ ಕೊಡಲಾಗುವುದು.

ಶ್ರೀ ಬಿ. ಗುರುಪ್ರಸಾದ್.—ಈ ೬ಳಿ ಜನರು ಬಹಳ ಹಿಂದಿನಿಂದ, ಸಾಗುವಳಿ ಮಾಡಿಕೊಂಡು ಬರುತ್ತಿದ್ದು, ಪಹಣಿ, ಪಟ್ಟಾ ಕೊಟ್ಟಿರುವುದರಿಂದ, ಇವತ್ತು ಅವೆಲ್ಲಾ ಇದ್ದು ಮಾಡಿದಂತಾಗುತ್ತದೆ. ಆದುದರಿಂದ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಕೊಟ್ಟಿರುವಕ್ಕೆ ಸಲಹೆಯನ್ನು ಗಮನಿಸಿ, ಕ್ರಮ ಕೈಗೊಳ್ಳುತ್ತೇನೆ. ಇದರಲ್ಲಿ ಸ್ವಲ್ಪ ಗೊಂದಲ ಇದೆ. ವಿಚಾರಣೆ ಮಾಡಿ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇನೆ.

೩) ಪೋಲೀಸ್ ಮತ್ತು ಅರಣ್ಯ ಅಧಿಕಾಲಿಗಳು ಚಿಕ್ಕಜಂಬೂರು ಗ್ರಾಮದಲ್ಲಿ ಶ್ರೀಗಂಧದ ಕಳ್ಳಸಾಗಾಣಿಕೆದಾರರನು ಹಿಡಿಯಲು ಹೋದಾಗ ನಡೆದ ಘಟನೆಯ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಸಾಗರ ವಿಭಾಗದ ಡೆಪ್ಯುಟಿ ಪೋಲೀಸ್ ಸೂಪರಿಂಟೆಂಡೆಂಟ್‌ರವರು ಮತ್ತು ಅರಣ್ಯ ಅಧಿಕಾರಿಗಳು ಚಿಕ್ಕಜಂಬೂರು ಗ್ರಾಮದಲ್ಲಿ ಶ್ರೀ ಗಂಧದ ಕಳ್ಳಸಾಗಾಣಿಕೆದಾರರನ್ನು ಹಿಡಿಯಲು ಹೋದಾಗ ನಡೆದ ದುರ್ಘಟನೆಯ ಬಗ್ಗೆ ಮಾನ್ಯ ಗೃಹಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ಮಾನ್ಯ ಗೃಹಸಚಿವರು),— ಮಾನ್ಯ ಅಧ್ಯಕ್ಷರೇ, ಮಾನ್ಯ ಬಿ.ಎಸ್. ಯಡಿಯೂರಪ್ಪನವರು ತಂದಿರತಕ್ಕಂಥ ಗಮನಸೆಳೆಯುವ ಸೂಚನೆಗೆ ಈ ಕೆಳಕಂಡ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ದಿನಾಂಕ ೩-೮-೮೬ರಂದು ಶ್ರೀ ಕಟಾವಕರ್ ಸಾಗರದ ಪೋಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟ್ ರವರು ಸಿಬ್ಬಂದಿಯೊಡನೆ ಶಿಕಾರಿಪುರ ತಾಲ್ಲೂಕು ಚಿಕ್ಕಜಂಬೂರು ಗ್ರಾಮಕ್ಕೆ ಗಂಧದ ಮರದ ಪ್ರಕರಣದ ತನಿಖೆಗಾಗಿ ಹೋಗಿದ್ದರು. ಅಲ್ಲಿ ಗಂಧದ ಮರ ಕಳ್ಳ ಸಾಗಾಣಿಕೆಗಾರರು ಸುಮಾರು ೨೫೦ ಮಂದಿ ಮಾರಕ ಅಸ್ತ್ರಗಳನ್ನು ಹೊಂದಿದ್ದು, ಅಧಿಕಾರಿಗಳ ಮೇಲೆ ಹಲ್ಲೆ ಮಾಡಲು ಪ್ರಯತ್ನ ಮಾಡಿದರು. ಈ ಕಳ್ಳಸಾಗಾಣಿಕೆದಾರರು ಅವರಲ್ಲೇ ಅಕ್ರಮ ಕೂಟ ಕೂಡಿಕೊಂಡು ಕರ್ತವ್ಯ ನಿರತರಾಗಿದ್ದ ಪೋಲೀಸರನ್ನು ಮತ್ತು ಅಧಿಕಾರಿಗಳನ್ನು ಮುಟ್ಟಿಹಾಕಬೇಕೆಂದು ಗುರಿ ಹೊಂದಿದ್ದು, ಆಕ್ರಮಣ ಮಾಡಿ ಅಧಿಕಾರಿಗಳು ತಮ್ಮ ಕಿಲಷವನ್ನು ನಿರ್ವಹಿಸಲು ಅಡಚಣೆ ಉಂಟುಮಾಡಿದರು. ಪೋಲೀಸರ ಆಯುಂಧಗಳನ್ನು ಕಿತ್ತುಕೊಳ್ಳಲು ಪ್ರಯತ್ನಪಟ್ಟರು. ಆ ಸಮಯದಲ್ಲಿ ಶ್ರೀ ಕಟಾವಕರ್, ಡೆಪ್ಯುಟಿ ಪೋಲೀಸ್ ಸೂಪರಿಂಟೆಂಡೆಂಟ್, ಸಾಗರರವರು ತಮ್ಮಲ್ಲಿದ್ದ ರಿವಾಲ್ವರ್‌ನಿಂದ ಮೂರು ಬಾರಿ ಗಾಳಿಯಲ್ಲಿ ಗುಂಡು ಹಾರಿಸಿದರು ಮತ್ತು ಶಿಕಾರಿಪುರ ಸಬ್‌ಇನ್ಸ್‌ಪೆಕ್ಟರ್ ಶ್ರೀ ಅಂಜನಪ್ಪನವರು ತಮ್ಮ ರೈಫಲ್‌ನಿಂದ ಒಂದು ಬಾರಿ ಗುಂಪು ಚದುರಿಸಲು ಗಾಳಿಯಲ್ಲಿ ಗುಂಡು ಹಾರಿಸಿದರು. ಈ ಘಟನೆಯ ಹಿಂದೆ ರಾಜಕೀಯ ನಾಯಂಕರ ಮತ್ತು ಯಾವ ಅಧಿಕಾರಗಳ ಕೈವಾಡವೂ ಇರುವುದಿಲ್ಲ. ಸದ್ಯದಲ್ಲಿ ಶಿಕಾರಿಪುರ ಮಾಂಗಾರು ಮಳೆಯಿಲ್ಲದೆ ಉಂಟಾಗಿರುವ ಬರಗಾಲ ಪರಿಸ್ಥಿತಿ ಬಿಟ್ಟರೆ ಉಳಿದಂತೆ ಸಾಮಾನ್ಯವಾಗಿದೆ. ಈ ರೀತಿ ಅಕ್ರಮ ಗುಂಪು ಹೂಡಿ ಪೋಲೀಸ್ ಮತ್ತು ಅರಣ್ಯ ಅಧಿಕಾರಿಗಳ ಮೇಲೆ ಆಕ್ರಮಣ ಮಾಡಿದವರಲ್ಲಿ ಐದು ಜನರನ್ನು ೧) ಸೈಯದ್ ಖಾನ್ ತಂದೆ ಗೌಸ್ ಖಾನ್, ೨) ಅಬ್ದುಲ್ ಖಾದರ್ ತಂದೆ ಬುಡೆಸ್ ಖಾನ್, ೩) ಅಬ್ದುಲ್ ಜಬ್ಬಾರ್ ಖಾನ್ ತಂದೆ ಬುಡಾನ್ ಖಾನ್, ೪) ಅಹಮ್ಮತ್ತುಲ್ಲ ಖಾನ್, ತಂದೆ ಸೈಯಾದ್ ಖಾನ್ ಮತ್ತು ೫) ರಷೀದ್ ಖಾನ್ ತಂದೆ ಬುಡಾನ್ ಖಾನ್‌ರನ್ನು ಬಂಧಿಸಲಾಯಿತು. ಈ ಗುಂಪಿನ ನಾಯಕನಾದ ಮಿಯಾಜಾನ್ ಎಂಬುವವನು ಕತ್ತಲೆಯಲ್ಲಿ ಪರಾರಿಯಾದನು. ಈತನನ್ನು ಸಹ ಬಂಧಿಸಬೇಕಾಗಿದೆ. ಬಂಧಿಸಿರುವವರಲ್ಲಿ ಒಬ್ಬರನ್ನೂ ಬಿಟ್ಟಿರುವುದಿಲ್ಲ. ಈ ಐದು ಜನ ಆರೋಪಿಗಳು ಬಿಡುಗಡೆಯಾಗಲು ನ್ಯಾಯಾಲಯದ ಮೊರೆ ಹೊಕ್ಕಿದ್ದಾರೆ. ಕೋರ್ಟ್‌ನಲ್ಲಿ ಬಿಡುಗಡೆಯ ಅರ್ಜಿ ವಿಚಾರಣೆಗಾಗಿ ಬಂದಿದ್ದು, ಪೋಲೀಸರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವರು. ಹೀಗಾಗಿ ಆರೋಪಿತರು ನ್ಯಾಯಾಲಯದಲ್ಲಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ತುಂಬಾ ಪ್ರಮುಖವಾದ ವಿಷಯದ ಮೇಲೆ ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಮಾಡಿದ್ದೇನೆ. ನಾನು ಪ್ರಾರಂಭದಲ್ಲಿ ಸಾಗರ ವಿಭಾಗದ ಡಿ.ಎಸ್.ಪಿ.ಗಳಾದ ಶ್ರೀ ಕಟ್ಟಾವಕರ್ ಅವರು ಏನು ತುಂಬಾ ಸಾಹಸ ಮಾಡಿದ್ದಾರೆ. ಇದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದೇನು ಸಣ್ಣ ವಿಚಾರ ಅಲ್ಲ. ಚಿಕ್ಕಜಂಬೂರು ಹಾಗೂ ಸುತ್ತಮುಂತ್ತ ಕಳ್ಳಸಾಗಾಣಿಕೆ ನಡೆಯುತ್ತಿದೆಯೆಂದು ಗೊತ್ತಾದ ತಕ್ಷಣ, ಒಂದು ವಾರದ ಹಿಂದೆ ತಾವು ಏನು ಈ ಕಟ್ಟಾವಕರ್ ಎಂಬ ಡಿ.ಎಸ್.ಪಿ.ಯವರನ್ನು ಕಳುಹಿಸಿಕೊಟ್ಟಿದ್ದೀರಿ. ಅವರು ಮಫ್ತಿಯಲ್ಲಿ ಕೆಲವು ಅರಣ್ಯಾಧಿಕಾರಿಗಳನ್ನು ಕರೆದುಕೊಂಡು ಆ ಗ್ರಾಮಕ್ಕೆ ಹೋಗುವ ಪ್ರಯತ್ನ ಮಾಡಿದರು. ಅವರು ಹೋಗುತ್ತಿದ್ದಾಗಲೇ ಎದುರುಗಡೆಯಿಂದ ಗಂಧದ ವಿಚಾರವನ್ನು ತುಂಬಿಕೊಂಡ ಒಂದು ಲಾರಿ ಬರುತ್ತಿತ್ತು. ಆಗ ಡ್ರೈವರ್ ಹೆದರಿಕೊಂಡು ಲಾರಿಯನ್ನು ಬಿಟ್ಟು ಓಡಿಹೋದ. ಆಗ ಕಟ್ಟಾವಕರ್ ರವರು ಯಾರನ್ನೂ ನಂಬದೆ ಲಾರಿಯನ್ನು ವಶಕ್ಕೆ ತೆಗೆದುಕೊಂಡು, ಡ್ರೈವ್ ಮಾಡಿಕೊಂಡು ಚಿಕ್ಕ ಜಂಬೂರು ಗ್ರಾಮಕ್ಕೆ ಬಂದರು. ಕಳ್ಳಸಾಗಾಣಿಕೆದಾರರನ್ನೂ ಕರೆದುಕೊಂಡು ಬಂದರು. ಗ್ರಾಮಕ್ಕೆ ಬಂದ ತಕ್ಷಣ ಆ ಕಳ್ಳಸಾಗಾಣಿಕೆದಾರರು ಗ್ರಾಮದ ಕೆಲವರಿಗೆ ಸನ್ನೆಯನ್ನು ಮಾಡಿದರು ಇದು ಅಲ್ಲಿರುವ ಕಳ್ಳಸಾಗಾಣಿಕೆದಾರರುಗಳಿಗೆ ತಿಳಿಯುತ್ತದೆ. ಇದು ಅಲ್ಲಿನ ಪದ್ಧತಿ ಇದು ಪ್ರತಿನಿತ್ಯ ನಡೆಯುತ್ತಿರುತ್ತದೆ. ಇದರಲ್ಲಿ ಏನೂ ವಿಶೇಷ ಇಲ್ಲ. ಆದರೆ ಇದು ಪೋಲೀಸ್ ಅಧಿಕಾರಿಗಳಿಗೆ ಗೊತ್ತಾಗಲಿಲ್ಲ. ಅವರು ಏನೂ ಸನ್ನೆಯನ್ನು ಮಾಡಲಿಲ್ಲ. ಆಗ ಸುತ್ತಮುಂತ್ತ ಇದ್ದಂಥ ೧೫೦–೨೦೦ ಜನರು ನುಗ್ಗಿ ಡಿ.ಎಸ್.ಪಿ.ಯವರನ್ನು ಲಾರಿಯಿಂದ ಈಚೆಗೆ ಎಳೆದುಕೊಂಡರು.

ಅಧ್ಯಕ್ಷರು.— ನೇರವಾಗಿ ವಿವರಣೆ ಕೇಳಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಪೋಲೀಸ್ ಅಧಿಕಾರಿಗಳು, ಅರಣ್ಯ ಅಧಿಕಾರಿಗಳು ಹಾಗೂ ಕಳ್ಳಸಾಗಾಣಿಕೆದಾರರಿಗೆ ಅಲ್ಲಿ ಘರ್ಷಣೆ ಆಯಿತು. ಇದು ಸಂಯುಕ್ತ ಕರ್ನಾಟಕ, ಪ್ರಜಾವಾಣಿ ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಇದು ಆದ ಮೇಲೆ ಪೋಲೀಸ್ ಅಧಿಕಾರಿಗಳು ರಿವಾಲ್ವಾರ್ ತೆಗೆದುಕೊಂಡು ನಾಲ್ಕು ಸುತ್ತು ಗುಂಡುಹಾರಿಸಬೇಕಾಯಿತು.

ಅಧ್ಯಕ್ಷರು. — ಸಚಿವರು ಉತ್ತರ ಕೊಟ್ಟಿದ್ದಾರೆ. ಅದರ ಬಗ್ಗೆ ನೇರವಾಗಿ ವಿವರಣೆ ಏನಾದರೂ ಕೇಳುವುದಿದ್ದರೆ ಕೇಳಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಶ್ರೀಗಂಧದ ಕಳ್ಳಸಾಗಾಣಿಕೆ ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ. ತಾವು ಅವಕಾಶ ಕೊಟ್ಟಿದ್ದೀರಿ, ಒಂದೆರಡು ನಿಮಿಷದಲ್ಲಿ ಮುಗಿಸುತ್ತೇನೆ. ಇದರ ಹಿನ್ನೆಲೆ ಹೇಳಬೇಕಾಗುತ್ತದೆ. ಅಲ್ಲಿ ಈ ರೀತಿ ನಿರಂತರವಾಗಿ ಕಳ್ಳಸಾಗಾಣಿಕೆ ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ. ಅಲ್ಲಿ ೧೫೦–೨೦೦ ಜನ ಮಾರಕಾಸ್ತ್ರಗಳನ್ನು ಇಟ್ಟುಕೊಂಡು ಹಲ್ಲೆ ಮಾಡಲು ಪ್ರಯತ್ನ ಮಾಡಿದರು. ಆಗ ಚಾಕಾಚಕ್ಯತೆಯಿಂದ ಪೋಲೀಸ್ ಅಧಿಕಾರಿಗಳು, ವೈರ್‌ಲೆಸ್ ಕಳುಹಿಸಿ, ಅವರನ್ನು ಅರೆಸ್ಟ್ ಮಾಡುವಂತಹ ಪ್ರಯತ್ನ ಮಾಡಿದರು. ಇದು ಬಹಳ ಪ್ರಮುಖವಾದ ವಿಷಯ, ಆರು ಮಂದಿಯನ್ನು ಬಂಧಿಸಲಾಗಿದೆ ಎಂದು ಪೋಲೀಸರು ತಿಳಿಸಿದ್ದಾರೆ. ತನಿಖೆ ನಡೆಯುತ್ತಿದೆ. ಆರು ಜನರನ್ನು ಬಂಧಿಸಿದ್ದೇವೆ ಎಂದು ವೈರ್‌ಲೆಸ್ ಮೆಸೇಜ್ ಕೂಡಾ ಕಳುಹಿಸಿಕೊಟ್ಟಿದ್ದಾರೆ. ಅದನ್ನು ತಾವು ವೆರಿಫೈ ಮಾಡಿ ನೋಡಬೇಕು. ಅಲ್ಲಿ ಘಟನೆಯಾದ ತಕ್ಷಣ ಆರು ಜನರನ್ನು ಅರೆಸ್ಟ್ ಮಾಡಿರುತ್ತಾರೆ. ಆದರಲ್ಲಿ ಬಿಟ್ಟಿರುವವರು ಯಾರು ಎಂದರೆ ಮಂಚಿಕೊಪ್ಪ ಮಂಡಲ್ ಪ್ರಧಾನ ಯಾರನ್ನು ಅರೆಸ್ಟ್ ಮಾಡಿದ್ದರು ಅವರನ್ನು ಬಿಟ್ಟಿದ್ದಾರೆ. ಇವರನ್ನೆಲ್ಲಾ ೩ನೇ ತಾರೀಖು ಅರೆಸ್ಟ್ ಮಾಡಿ, ಸ್ಟೇಷನ್‌ನಲ್ಲಿ ಇಟ್ಟರು. ೪ನೇ ತಾರೀಖು ಬೆಳಿಗ್ಗೆ ಈ ಮಂಡಲ್ ಪಂಚಾಯಿತಿ ಪ್ರಧಾನರವರನ್ನು ಮಾತ್ರ ಬಿಟ್ಟರು. ಅಲ್ಲಿ ಜಿಲ್ಲಾ ಪರಿಷತ್ ಸದಸ್ಯರಾದ ಶ್ರೀ ಫಕೀರಪ್ಪ ಎನ್ನುವವರು ಹಾಗೂ ಶಿರಾಳಕೊಪ್ಪ ಪುರಸಿಪಲ್ ಉಪಾಧ್ಯಕ್ಷರು, ಈ ಇಬ್ಬರೂ ಸಹ ಹೋಗಿ ಅಲ್ಲಿನ ತಹಸೀಲ್ದಾರರ ಹತ್ತಿರ ಗಲಾಟೆ ಮಾಡಿ ಅವರನ್ನು ಹೆದರಿಸುವಂತಹ ಪ್ರಯತ್ನ ಮಾಡಿದರು. ಅಲ್ಲಿ ದೊಡ್ಡ ಗಲಾಟೆ ಆಗಿದೆ. ಇನ್ನೂ ನೂರಾರು ಜನರನ್ನು ಅರೆಸ್ಟ್ ಮಾಡಬೇಕಾಗಿತ್ತು. ಆ ದಿನ ಬೆಳಿಗ್ಗೆ ಮಂಡಲ ಪಂಚಾಯತ್ ಪ್ರಧಾನರನ್ನು ಬಿಡಿಸಿ, ಇನ್ನು ಉಳಿದ ಐದು ಜನರನ್ನು ಇಟ್ಟುಕೊಂಡು, ಐದು ಜನ ಎಂದು ಕೇಸ್ ಹಾಕಿದರು. ಇದು ಐದು ಜನ ಎಂದು ಆಯಿತು. ಪತ್ರಿಕೆಯಲ್ಲಿ ಆರು ಜನ ಎಂದು ಇದೆ.

ಸನ್ಮಾನ್ಯ ಸಚಿವರಾದಂಥ ಶ್ರೀಮಾನ್ ಜಾಲಪ್ಪನವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟೇ. ತಮ್ಮ ಕಾಲದಲ್ಲಿಯಾದರೂ ನ್ಯಾಯ ಸಿಗುತ್ತದೆ ಎನ್ನುವ ನಂಬಿಕೆಯನ್ನು ಇಟ್ಟುಕೊಂಡಿರುವವನು ನಾನು. ಪತ್ರಿಕೆಯಲ್ಲಿ ಬಂದಿರುವಂತೆ ೬ ಜನರನ್ನು ಅರೆಸ್ಟ್ ಮಾಡಿದರು. ಆದರೆ ಸ್ವಲ್ಪ ಸಮಯದ ನಂತರ ಶಿರಾಳಕೊಪ್ಪದ ಜಿಲ್ಲಾ ಪರಿಷತ್ತು ಸದಸ್ಯರು ಮತ್ತು ವೈಸ್ ಪ್ರೆಸಿಡೆಂಟ್ ರವರು ಫೋನ್ ಮಾಡಿ ಹೇಳಿದರೆಂದು ಹೇಳಿ ಪೋಲೀಸಿನವರು ಒಬ್ಬ ಮಂಡಲ್ ಪಂಚಾಯಿತಿ ಪ್ರಧಾನರನ್ನು ಬಿಟ್ಟು ಬಿಟ್ಟಿದ್ದಾರೆ. ಇದು ಸರಿಯಾದುದು ಅಲ್ಲ. ಈ ಬಗ್ಗೆ ತಾವು ಪೂರ್ಣ ಮಾಹಿತಿಯನ್ನು ತರಿಸಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಆ ಮಂಡಲ ಪಂಚಾಯಿತಿಯ ಪ್ರಧಾನರ ಮೇಲೆ ಕೂಡ ಕೇಸ್ ಬುಕ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವುದು ಸತ್ಯ ವಾಗಿದ್ದರೆ ಖಂಡಿತವಾಗಿ ಅಂತಹ ಅಧಿಕಾರಿಗಳ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಜೊತೆಗೆ ನನಗೆ ಒಬ್ಬ ಪ್ರಧಾನರು ಟೆಲಿಗ್ರಾಂ ಸಹ ಕೊಟ್ಟಿದ್ದಾರೆ. ಅದೇ ಪ್ರಧಾನರು ಇರಬಹುದೆಂದು ಕಾಣುತ್ತದೆ. ನಾನು ಒಂದು ಮಾತು ಸಹ ಹೇಳಿದ್ದೇನೆ. ಪ್ರಧಾನರಿಗೂ ಇದಕ್ಕೂ ಸಂಬಂಧವಿಲ್ಲ ಆದರೂ ಇದನ್ನು ಸ್ವಲ್ಪ ಕಂಡುಹಿಡಿಯಿರಿ ಎನ್ನುವ ಮಾತನ್ನು ಸಹ ಹೇಳಿದ್ದೇನೆ. ಇತ್ತೀಚೆಗೆ ಇಂತಹ ಘಟನೆಗಳು ಅಲ್ಲಲ್ಲಿ ನಡೆಯುತ್ತಿವೆ. ಮೊನ್ನೆ ದಿವಸ ಆನೇಕಲ್ಲಿನಲ್ಲಿ ಸಹ ನಡೆದಿದೆ. ಆಗ ೧೫ ಸುತ್ತು ಗುಂಡನ್ನು ಗಾಳಿಯಲ್ಲಿ ಹಾರಿಸಲಾಯಿತು. ಇನ್ನು ಮುಂದೆ ಗಾಳಿಯಲ್ಲಿ ಗುಂಡು ಹಾರಿಸಿದರೆ ಪ್ರಯೋಜನವಿಲ್ಲ. ಗಾಳಿಯಲ್ಲಿ ಹಾರಿಸಿ ಸುಮ್ಮನೆ ಏತಕ್ಕೆ ವೇಸ್ಟ್ ಮಾಡಬೇಕು ? ನಮ್ಮ ಜನ ಕಳ್ಳರಿಗೆ, ದರೋಡೆ ಕೋರರಿಗೆ ಸ್ಟ್ರಗಲಿಂಗ್ ಮಾಡುವವರಿಗೆ ರಕ್ಷಣೆ ಕೊಡಬಾರದು. ಇಂತಹ ಸಂದರ್ಭದಲ್ಲಿ ಪೋಲೀಸಿನವರು ತಮ್ಮ ರಕ್ಷಣೆ ಮಾಡಿಕೊಳ್ಳುವ ಸಲುವಾಗಿ ಗುಂಡು ಹಾರಿಸಬೇಕಾಗುತ್ತದೆ. ಇಂತಹ ಅಕ್ರಮ ಕೃತ್ಯ ಗಳನ್ನು ಸರ್ಕಾರ ಇನ್ನು ಮುಂದೆ ಸಹಿಸುವುದಿಲ್ಲ. ಈ ಬಗ್ಗೆ ಸರಿಯಾದ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಮಂತ್ರಿಗಳ ಉತ್ತರ ನನಗೆ ಸಂತೋಷನಾಯಿತು. ಆದರೆ ಶಿಕಾರಿಪುರ ತಾಲ್ಲೂಕಿನಲ್ಲಿ ಶ್ರೀಗಂಧದ ಕಳ್ಳ ಸಾಗಾಣಿಕೆ ವಿಪರೀತವಾಗಿ ನಡೆಯುತ್ತಿದೆ. ಇದಕ್ಕೆ ಕೆಲವು ರಾಜಕೀಯ ಮುಖಂಡರ ಬೆಂಬಲ ಸಹ ಇದೆ. ನಾನು ಆ ವ್ಯಕ್ತಿಗಳ ಹೆಸರುಗಳನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆ ರಾಜಕೀಯ ವ್ಯಕ್ತಿಗಳು ಯಾರ್ಯಾರು ಎಂದು ತಮಗೆ ಈಗಾಗಲೇ ಪೋಲೀಸ್ ವರದಿಯಲ್ಲಿ ಸಿಕ್ಕಿರ ಬಹುದು. ಆದರೆ ಈ ಮಂಡಲ ಪಂಚಾಯಿತಿ ಪ್ರಧಾನರನ್ನು ಅರೆಸ್ಟ್ ಮಾಡಿ ಪುನಃ ಬಿಟ್ಟಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ನಿಮಗೆ ಬಂದಿರತಕ್ಕಂಥ ಟೆಲಿಗ್ರಾಂ ಆ ಮಂಡಲ ಪಂಚಾಯಿತಿಯ ಪ್ರಧಾನರದ್ದೇ ಆದರ ವಿವರಕ್ಕೆ ನಾನು ಈಗ ಹೋಗುವುದಿಲ್ಲ. ಈ ಮಂಡಲ ಪಂಚಾಯಿತಿ ಪ್ರಧಾನರನ್ನು ಬಿಡುವಂತೆ ಒಬ್ಬ ಕ್ಯಾಬಿನೆಟ್ ಮಂತ್ರಿ ಸಹ ಫೋನ್ ಮಾಡಿ ಹೇಳಿದ್ದಾರೆ. ಅವರ ಹೆಸರು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.— ನೀವು ಮತ್ತೆ ಅಲ್ಲಿಗೆ ಹೋದಿರಿ. ಅದು ಬೇಡ. ವಿಷಯಕ್ಕೆ ಸೀಮಿತವಾಗಿ ಮಾತನಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ನಾನು ಆ ವ್ಯಕ್ತಿ ಹೆಸರು ಹೇಳುವುದಿಲ್ಲ.

ಅಧ್ಯಕ್ಷರು.— ಅದೆಲ್ಲಾ ಏನೂ ಬೇಡ.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೇ, ಅನಾವಶ್ಯಕವಾಗಿ ಅದೆಲ್ಲಾ ಬೇಡ. ತಪ್ಪಿತಸ್ಥರ ಮೇಲೆ ನಾನು ಕ್ರಮ ಕೈಗೊಳ್ಳುತ್ತೇನೆ. ನೀವು ಆ ರೀತಿ ಮಾತನಾಡಿದರೆ ಆಳಿಯ ಅಲ್ಲ ಮಂಗಳ ಗಂಡ ಎಂದು ಹೇಳಿದಂತೆ ಆಗುತ್ತದೆ...

ಅಧ್ಯಕ್ಷರು.— ಸಾಕು. ಈಗ ಶಾಸನ ರಚನೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನಹಳ್ಳಿಯಲ್ಲಿ ದೊಡ ದರೋಡೆ ನಡೆದಿದೆ...

ಅಧ್ಯಕ್ಷರು.— ನೀವು ನೋಟೀಸ್ ಕೊಡಬೇಕಾಗುತ್ತದೆ. ನಾನು ಮೊದಲೇ ತಮಗೆ ಹೇಳಿದ್ದೇನೆ. ಇದು ಸಾರ್ವಜನಿಕ ಜರೂರು ವಿಷಯ ಆಗಿದೆ. ಆದರೆ ಅದಕ್ಕೆ ನಿಯಮಾವಳಿಗಳ ಪ್ರಕಾರ ನೋಟೀಸ್ ಕೊಡಿ ನಾನು ಅವಕಾಶ ಮಾಡಿಕೊಡುತ್ತೇನೆಂದು ನಾನು ಆದರೆ ಹೇಳಿದ್ದೇನೆ ತಾವು ಆ ರೀತಿ ಮಾಡದೆ ಇದ್ದದ್ದಕ್ಕಿದ್ದಂತೆ ಎದ್ದು ನಿಂತು ಈ ರೀತಿ ಮಾತನಾಡಿದರೆ ಹೇಗೆ ? ಹಿರಿಯ ಸದಸ್ಯರನ್ನು ನೋಡಿ ಸ್ವಲ್ಪ ಕಲಿತುಕೊಳ್ಳಿ. ನೀತಿ ನಿಯಮಗಳನ್ನು ಪಾಲನೆ ಮಾಡಿ. ತಾವು ಇನ್ನು ಹೊಸಬರು.

ಶ್ರೀ ಬಿ. ಲಕ್ಕಪ್ಪ.-- ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.-- ಮಾನ್ಯ ಸದಸ್ಯರು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ನಿಯಮ 334ರ ಮೇರೆಗೆ

ಸರ್ಕಾರದ ವಸತಿ ಗೃಹಗಳನ್ನು ಸರ್ಕಾರ ನಿರ್ದೇಶನ ನೀಡಿದವರಿಗೆ ನೀಡದೆ ಖಾಲಿಯಾಗಿಟ್ಟಿರುವುದರ ಬಗ್ಗೆ

ಶ್ರೀ ಬಿ. ಸ್ವಾಮಿರಾವ್.-- ಬೆಂಗಳೂರಿನಲ್ಲಿ ಸರಕಾರದ ವಸತಿಗೃಹಗಳು ಖಾಲಿಯಾಗಿದ್ದರೂ ಸಹ ಸರಕಾರಿ ವಸತಿಗೃಹಗಳ ಹಂಚಿಕೆ ನಿಯಮ ೧೪ರ ಅನ್ವಯ ಸರಕಾರ ನಿರ್ದೇಶನ ನೀಡಿದವರಿಗೆ ಮನೆಗಳನ್ನು ನೀಡದೆ ಸಂಬಂಧಿಸಿದ ಅಧಿಕಾರಿಗಳು ಮನೆಗಳನ್ನು ಮನಸ್ಸೀ ನೀಡುತ್ತಿರುವುದಲ್ಲದೆ, ಮನೆಗಳು

(ಮಾನ್ಯ ಅಧ್ಯಕ್ಷರ ಅಪ್ಪಣೆಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಕಳೆದ ಸಂಮಾರು ಒಂದು ವರ್ಷದಿಂದಲೂ ಖಾಲಿಯಾಗಿದ್ದರೂ ಸಹ ಮನೆಗಳನ್ನು ನೀಡದೆ ಸರಕಾರಕ್ಕೆ ಆರ್ಥಿಕವಾಗಿ ನಷ್ಟ ಉಂಟು ಮಾಡುತ್ತಿರುವುದರಿಂದ ಕಾನೂನು ರೀತ್ಯ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಕೊಳ್ಳಲು ಮತ್ತು ಕಾನೂನು ರೀತ್ಯಾ ಮನೆಗಳನ್ನು ಹಂಚುವ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.-- ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ, ನಾನು ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

ರೋಣ ತಾಲ್ಲೂಕು ಗಜೇಂದ್ರಗಡ ನಗರ ಸಭೆಯಂವರು ಅನಪೇಕ್ಷಿತ ಅವ್ಯವಹಾರಕ್ಕೆ ಹಣ ಖರ್ಚು ಮಾಡುತ್ತಿರುವುದರ ಬಗ್ಗೆ

ಶ್ರೀ ಜ್ಞಾನದೇವ್ ಎಸ್. ದೊಡ್ಡ ಮೇಟಿ.— ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯ ರೋಣ್ ತಾಲ್ಲೂಕು ಗಜೇಂದ್ರ ಗಡ ನಗರಸಭೆ ಅನಪೇಕ್ಷಿತ ... ಅವ್ಯವಹಾರಕ್ಕೆ ''ಹಣ'' ವನ್ನು ಖರ್ಚು ಮಾಡಂತ್ತಿದ್ದು, ವಿವರ ತರಿಸಿ ಅವಶ್ಯಕ ನೀರು ಸರಬರಾಜಿಗೂ ಲಕ್ಷವನ್ನು ಕೊಡದೆ, ಜನರ ಸಹನೆಯನ್ನು ಕೆಣಕುವ ಕೆಲಸಕ್ಕೆ ಕೈಹಾಕಿರುವರು. ಯಾವುದೇ ನಾಗರೀಕ ಅವಶ್ಯಕ ಹಿತರಕ್ಷಣೆಯ ಜವಾಬ್ದಾರಿಯನ್ನು ಅಲ್ಲಿಯ ಮುಖ್ಯಾಧಿಕಾರಿಗಳು ವಹಿಸಿಕೊಳ್ಳದೇ, ಕರ್ತವ್ಯಚ್ಯುತಿ ಮಾಡುತ್ತಿರುವುದನ್ನು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರಬಯಸುವೆ. ಅಲ್ಲದೆ ಅಧಿಕಾರಿಗಳ ಪ್ರಕಟಣೆಗಳು ಜನರಿಗೆ ತಪ್ಪು ತಿಳುವಳಿಕೆ ಕೊಡುವಂಥಾದ್ದು, ಇದನ್ನು ಸರ್ಕಾರದ ಗಮನಕ್ಕೆ ತರಬಯಸುವೆ, ಮತ್ತು ಸಬ್‌ಮರ್ಸಿಬಲ್ ಪಂಪುಗಳೂ ಸುಟ್ಟುಹೋಗಿವೆ, ಎಂಬುದನ್ನು ಮಾನ್ಯ ಸಚಿವರ ಗಮನಕ್ಕೂ ಈ ಒಳಗಾಗಿ ಮೇಲಿಂದ ಮೇಲೆ ತಂದಿರುವೆ

ಶ್ರೀ ಎಂ. ರಘುಪತಿ.— ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಆ ಸದನದಲ್ಲಿದ್ದಾರೆ. ಅವರು ಬಂದಮೇಲೆ ಅವರಿಗೆ ಈ ವಿಚಾರವನ್ನು ತಿಳಿಸಿ ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುವಂತೆ ಹೇಳುತ್ತೇನೆ.

ಶ್ರೀ ಜ್ಞಾನದೇವ್ ಎಸ್. ದೊಡ್ಡ ಮೇಟಿ.-- ಅಲ್ಲಿ ಕುಡಿಯಂವ ನೀರಿನ ಸಮಸ್ಯೆ ಬಹಳ ಇದೆ.

ಅಧ್ಯಕ್ಷರು.— ಮಾನ್ಯ ದೊಡ್ಡ ಮೇಟಿಯವರೆ ನಿಯಮ ೩೩೪ರಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲ.

ಶ್ರೀ ಜ್ಞಾನದೇವ್ ಎಸ್. ದೊಡ್ಡಮೇಟಿ.--ಇಲ್ಲಿ ಮಾತನಾಡುವುದಕ್ಕಿ ಬರುವುದಿಲ್ಲವೆಂದು ತಾವು ಹೇಳುತ್ತೀರಿ. ನಾವು ಅಲ್ಲಿಗೆ ಹೋದರೆ ಆ ಜನ ನಮ್ಮನ್ನು ಮಾತನಾಡುವುದಕ್ಕೆ ಬರುವುದಿಲ್ಲ.

Don't record ***